## ಕಥೋಪದೇಶ



# ಬಯಸಿದಂತೆ ಪ್ರಾಪ್ತಿ

ಕೆ. ಗಾಯತ್ರಿ ಮಂಜುನಾಥ

ಕಲೆ : ಜೆ.ಸಿ. ಸಿದ್ದಲಿಂಗಯ್ಯ

ಒಂದು ಮಠದಲ್ಲಿ ಭಾಗವತ ಪುರಾಣದ ಕಥಾ ಕಾಲಕ್ಷೇಪ ನಡೆಯುತ್ತಿತ್ತು. ಆಗ ಆ ದಿನ ಗೋವರ್ಧನ ಗಿರಿಯನ್ನು ಎತ್ತುವ ಪ್ರಸಂಗದಲ್ಲಿ, ಭಗವಂತನು ತನ್ನ ಲೀಲಾಮಾತ್ರದಿಂದ ಎಲ್ಲರನ್ನೂ ತನ್ನ ಮಕ್ಕಳಂತೆ ಹೇಗೆ ಕಾಪಾಡುತ್ತಾನೆ ಎಂಬುದರ ವಿವರಣೆಯಾಗುತ್ತಿತ್ತು. ಎಲ್ಲರೂ ಶ್ರದ್ಧಾಭಕ್ತಿಗಳಿಂದ ಕೇಳುತ್ತಿರುವಾಗ ಶ್ರೋತೃಗಳಲ್ಲಿ ಒಬ್ಬ, "ಭಗವಂತನು ಎಲ್ಲರನ್ನೂ ಒಂದೇ ರೀತಿಯಾಗಿ ನೋಡುವುದಿಲ್ಲ. ಒಬ್ಬರನ್ನು ಬಡವ ಒಬ್ಬರನ್ನು ಶ್ರೀಮಂತ ಈ ರೀತಿ ಮಾಡಿರುತ್ತಾನೆ. ಒಬ್ಬರಿಗೆ ಸ್ವರ್ಗ, ಇನ್ನೊಬ್ಬರಿಗೆ ನರಕ ಈ ರೀತಿಯಾಗಿ ನೀಡುತ್ತಾನೆ. ದೇವರು ಒಂದೇ ರೀತಿ ಎಲ್ಲರನ್ನೂ ಕಾಪಾಡುವನು ಎಂಬುದನ್ನು ನೀವು ದೃಷ್ಟಾಂತ ಸಹಿತವಾಗಿ ತೋರಿಸಿದರೆ ಆಗ ನಾನು ಒಪ್ಪಿಕೊಳ್ಳುತ್ತೇನೆ" ಎಂದ.

ಭಾಗವತೋತ್ತಮರು ಪ್ರಶ್ನಿಸಿದವನನ್ನು ಹಾಗೂ ಇತರ ಶ್ರೋತೃಗಳನ್ನು ಕುರಿತು ಹೇಳಿದರು: "ಇಲ್ಲಿ ಮಠದ ಒಳಕ್ಕೆ ಹೋದರೆ ಮೂರು ಕೊಠಡಿಗಳಿವೆ. ಅವುಗಳ ಬಾಗಿಲುಗಳು ಹಾಕಿರುತ್ತವೆ. ಬಾಗಿಲುಗಳ ಮೇಲೆ ಬರೆದಿರುವುದನ್ನು ಓದಿ ತಮಗೆ ಎಲ್ಲೆಲ್ಲಿಗೆ ಬೇಕೊ ಅಲ್ಲಿಗೆ ಹೋಗಿ." ಅವರ ಸಲಹೆಯಂತೆ ಶ್ರೋತೃಗಳೆಲ್ಲರೂ ಹೋಗಿ ನೋಡಿದಾಗ ಮೊದಲನೆಯ ಕೊಠಡಿಯ ಬಾಗಿಲ ಮೇಲೆ 'ಸ್ವರ್ಗಕ್ಕೆ ದಾರಿ'ಎಂದೂ, ಎರಡನೆಯ ಕೊಠಡಿಯ ಬಾಗಿಲ ಮೇಲೆ ಕೊಪ್ಪರಿಗೆ ಹಣವಿದೆ, ಯಾರಿಗೆ ಎಷ್ಟು ಬೇಕೊ ಅಷ್ಟು ತೆಗೆದುಕೊಳ್ಳಬಹುದು ಎಂದೂ, ಮೂರನೇ ಕೊಠಡಿಯ ಬಾಗಿಲ ಮೇಲೆ ಭಗವಂತನಲ್ಲಿಗೆ ದಾರಿ ಎಂದೂ ಬರೆದಿರುತ್ತದೆ. ಕೊಠಡಿಗಳ ಹೊರಗೆ ಪಡಸಾಲೆಯಲ್ಲಿ ಇರುವವರಿಗೆ ಪ್ರಾಪಂಚಿಕ ಸುಖವೆಲ್ಲ ದೊರೆಯುತ್ತದೆ, ಅದರೊಂದಿಗೆ ದುಃಖವೂ ಇದೆ ಎಂಬ ಸೂಚನೆ ಇರುತ್ತದೆ.

ಕೆಲವರು ಶ್ರೋತೃಗಳು ಒಂದನೆ ಕೊಠಡಿಯ ಬಾಗಿಲಿಗೆ ಹೋದರು, ಕೆಲವರು ಎರಡನೆಯ ಕೊಠಡಿಯ ಬಾಗಿಲಿಗೆ ಹೋದರು ಮತ್ತೂ ಕೆಲವರು ಇಲ್ಲೇ ಇದ್ದು ಸುಖವನ್ನು ಅನುಭವಿಸೋಣ ಎಂದು ಪಡಸಾಲೆಯಲ್ಲೇ ಕುಳಿತುಕೊಂಡರು. ಯಾರೊಬ್ಬರೂ ಭಗವಂತನಲ್ಲಿಗೆ ದಾರಿ ಎಂದು ಬರೆದಿರುವ ಜಾಗಕ್ಕೆ ಹೋಗಲಿಲ್ಲ.

ಆಗ ಭಾಗವತೋತ್ತಮರು ಪ್ರಶ್ನೆ ಕೇಳಿದವನನ್ನು ಕರೆದು, "ನೋಡಿದೆಯಾ,ಯಾರ‍್ಯಾರು ಏನೇನನ್ನು ಅಪೇಕ್ಷಿಸುತ್ತಾರೊ ಅದನ್ನು ಭಗವಂತ ನೀಡುತ್ತಾನೆ" ಎಂದು ಹೇಳಿ ಪ್ರಶ್ನಿಸಿದವನ ಅನುಮಾನ ಪರಿಹರಿಸಿದರು.

✡

